# ಜೀವನ ಪ್ರೀತಿಯ ಬರಹಗಳು

ಮಹಿಳಾ ವಿಶೇಷವಾದ ಈ ಸಂಚಿಕೆಯಲ್ಲಿ ಕನ್ನಡ ಲೇಖಕಿಯರ ಸಂವೇದನಾಶೀಲ ದನಿಗಳನ್ನು ಓದುಗರ ಎದುರಿಗೆ ಇಡಲಾಗಿದೆ. ಇಲ್ಲಿನ ಬರಹಗಳು ಕನ್ನಡ ಕಥಾಸಾಹಿತ್ಯದ ಉಡುಪಿಗೆ ಕೆಲವು ಬಣ್ಣದ ಚಿತ್ತಾರಗಳನ್ನು ಸೇರಿಸಿವೆ ಮಾತ್ರವಲ್ಲ, ಲೇಖಕಿಯರ ಬರವಣಿಗೆಯ ಅಗಾಧ ಚೈತನ್ಯವನ್ನೂ ಮನಗಾಣಿಸುವಂತಿವೆ.

ಇಲ್ಲಿರುವ ಕತೆಗಳು ಕತೆಯನ್ನು ನೇಯುವ ಕಾಯಕದಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡಿರುವ ಬರಹಗಾರ್ತಿಯರದು. ಅವು ಮಹಿಳಾ ಕಥಾಲೋಕದ ಚಲನಶೀಲತೆಯನ್ನು ತೋರುವುದರೊಂದಿಗೆ ನಮ್ಮ ದೈನಿಕದ ಬದುಕಿನ ಜೀವಂತ ಪ್ರತಿಫಲನಗಳೂ ಆಗಿವೆ. ಇಲ್ಲಿ ಅಚ್ಚಾಗಿರುವ ಕತೆಗಳಲ್ಲಿ, ಪ್ರಬಂಧಗಳಲ್ಲಿ ಹೆಣ್ಣಿನ ಭಾವಲೋಕವಿದೆ, ಸೂಕ್ಷ್ಮಗ್ರಹಿಕೆಗಳಿವೆ, ಬದುಕನ್ನು ನೋಡುವ ಅವರದೇ ಆದ ನೋಟವಿದೆ. ಅದಕ್ಕೂ ಮುಖ್ಯವಾಗಿ ಅವು ಧ್ವನಿಪೂರ್ಣವಾಗಿವೆ, ಮನುಷ್ಯನ ಹಲವು ಬಗೆಯ ಅವಸ್ಥೆಗಳನ್ನು ಚಿತ್ರಿಸಿವೆ. ಈ ಬರಹಗಳಲ್ಲಿ ಹೆಣ್ಣಿನ ನಿಜದನಿಗಳು ಕೇಳಿಸುತ್ತವೆ. ನಮ್ಮ ನಿತ್ಯದ ಭಾಷೆ, ಬದುಕಿನ ಕ್ರಮ, ಚಿಂತನೆಗಳು ಗಂಡಿನ ನುಡಿಗಟ್ಟಿನಿಂದ, ಪ್ರಭಾವದಿಂದ ಹೊರತಾಗಿ ಉಳಿದಿಲ್ಲ. ಹಾಗಿರುವಾಗ ಹೆಣ್ಣಿನ ದೃಷ್ಟಿಯಿಂದ ಅಭಿವ್ಯಕ್ತಿಸಲ್ಪಟ್ಟಿರುವ, ಸದ್ಯದ ತುರ್ತನ್ನು ಒಳಗೊಂಡ ಇಲ್ಲಿನ ಬರಹಗಳು ಈ ಕಾಲದ ದಾಖಲೆಯಾಗಲು ಅರ್ಹವಾಗಿವೆ.



ಕಲೆ: ವೆಂಕಟ್ರಮಣ ಭಟ್

ಇವುಗಳಲ್ಲಿ ಯಾವುದೇ ಜಡ ಸಿದ್ಧಾಂತದ ಸೋಗಿಲ್ಲ ಎಂಬುದನ್ನು ಮೊದಲಿಗೇ ಕಾಣಿಸಬೇಕು. ಜೀವನಕ್ಕೆ ಬೇಕಾದ ಎಲ್ಲ ಉತ್ತಮ ಸಿದ್ಧಾಂತಗಳು ಕೊನೆಗೆ ಹೋಗಿ ನಿಲ್ಲುವುದು ಮಾನವೀಯತೆ ಮತ್ತು ಸಮಾನತೆಯೇ ಕಡೆಗೇ. ಕೈಗೆ ಸಿಗದಂತೆ ನಿರಂತರವಾಗಿ ಹರಿಯುವ ಬದುಕನ್ನು ಹಿಡಿಯಲು ಯತ್ನಿಸುವ ಇಲ್ಲಿನ ಬರಹಗಳು ಸಿದ್ಧಾಂತಗಳ ಹೊರಗೇ ಇರುವುದರಿಂದ ಸೂಕ್ಷ್ಮವಾಗಿವೆ, ಪ್ರಖರವಾಗಿವೆ, ಬದುಕಿಗೆ ಕೊಟ್ಟ ಪ್ರತಿಸ್ಪಂದನಗಳಾಗಿವೆ. ಬದುಕನ್ನು ಕತೆಗಳ ಮೂಲಕ ಅರಿಯಲು ಪ್ರಯತ್ನಿಸಿರುವ ಲೇಖಕಿಯರು ಅವುಗಳಲ್ಲಿ ಅಪೂರ್ವವಾದ ಕಾಣ್ಕೆಗಳನ್ನು ಕೊಟ್ಟಿದ್ದಾರೆ. ಅದು ಅವರ ಕತೆಗಳ ಕಲಾತ್ಮಕ ಹೆಣಿಗೆಯಲ್ಲಿಯೇ ಕಾಣುತ್ತದೆ. ಕಲಾಕೃತಿಯೊಂದಕ್ಕೆ ಸಿದ್ಧಾಂತ, ವಾದಗಳಿಗಿಂತ ಹೆಚ್ಚಿನ ಪ್ರಭಾವ, ಶಕ್ತಿ ಇದೆ ಎಂಬುದನ್ನು ಈ ಸಂಚಿಕೆಯ ಬರಹಗಳು ತೋರುವಂತಿವೆ. ಜೀವವಿರೋಧಿ ಸಿದ್ಧಾಂತಗಳು ನಮ್ಮ ಬದುಕಿನ ಮೇಲೆ ಸವಾರಿ ಮಾಡಿ ಪ್ರತಿಕ್ಷಣ ಆತಂಕಕ್ಕೆ ದೂಡುತ್ತಿರುವುದನ್ನು ಓದುಗರು ಗಮನಿಸಿಯೇ ಇರುತ್ತಾರೆ. ಅಂತಹ ಸಿದ್ಧಾಂತಗಳಿಂದ ಕ್ರಿಯಾಶೀಲತೆಯಾಗಲೀ, ಹೊಸದರ ಸೃಷ್ಟಿಯಾಗಲೀ ಸಾಧ್ಯವಾಗದು. ಬದಲಿಗೆ ಅದು ಸೃಜನಶೀಲತೆಯ ಹರಿವಿಗೆ ತಡೆಯೊಡ್ಡಬಹುದು. ಇದರಿಂದ ಹೊರತಾಗಿರುವ ಇಲ್ಲಿನ ಕತೆಗಳು ತಮ್ಮ ಅಪ್ಪಟ ಮಾನವೀಯ ಚೈತನ್ಯದಿಂದ ಬದುಕಿನ ಹಲವು ಸ್ತರಗಳನ್ನು ಕಾಣಿಸಬಲ್ಲವು; ಅರ್ಥದ ಹತ್ತಾರು ಸೆಲೆಗಳನ್ನು ಓದುಗರಲ್ಲಿ ಉಕ್ಕಿಸಬಲ್ಲವು. ಆದ್ದರಿಂದಲೇ ಅಂತಹ ಕೃತಿಗಳು ಯಾವತ್ತಿಗೂ ನಮ್ಮ ಅಂತಃಕರಣವನ್ನು, ಪ್ರಜ್ಞೆಯನ್ನು ಅಲೆಗಳಂತೆ ತಾಕುತ್ತಲೇ ಇರುತ್ತವೆ ಎಂಬುದನ್ನು ಇಲ್ಲಿ ಸೂಚಿಸಬಹುದು.

ಕನ್ನಡದ ಅಪರೂಪದ ಬರಹಗಾರ್ತಿ ಎಚ್.ಎಸ್. ಶ್ರೀಮತಿ ಅವರ ಸಂದರ್ಶನ ಈ ಸಂಚಿಕೆಯಲ್ಲಿದೆ. ಈ ಸಂದರ್ಶನವು ಅವರ ಚಿಂತನೆಯ ವಿಸ್ತಾರವನ್ನು, ಕನ್ನಡ ಬೌದ್ಧಿಕ ವಲಯಕ್ಕೆ ಅವರು ಕೊಟ್ಟ ಕೊಡುಗೆಯನ್ನು ಅರಿಯಲು ಓದುಗರಿಗೆ ನೆರವಾಗಬಲ್ಲದು.

**ಸಂದೀಪ ನಾಯಕ**